# ಈ ಲೇಖನದ ವಿಷಯಾನುಕ್ರಮಣಿಕೆ


ಷಷ್ಠಿಪೂರ್ತಿಶಾಂತಿ 2

ಷಷ್ಠಿಪೂರ್ತಿಶಾಂತಿ ಎಂದರೇನು 2

ಏಕೆ ಮಾಡಬೇಕು 3

ಯಾವಾಗ ಮಾಡಬೇಕು 5

ಎಲ್ಲಿ ಮಾಡಬೇಕು 8

ಶಾಂತಿಯನ್ನು ಆಚರಿಸಿಕೊಳ್ಳುವ ಕ್ರಮ 8

ಜಪ 9

ಶಾಂತಿಯ ಪೂರ್ವಸಿದ್ಧತೆಗಳು 11

ಪೂಜಾಮಂಟಪ 12

ಹೋಮದ ಕುಂಡಗಳು 17

ಅಭಿಷೇಕದ ವೇದಿಕೆ 20

ಶಾಂತಿಯ ಕ್ರಮ 21

ಅನುಸಂಧಾನ ಮತ್ತು ಗುರುಸ್ಮರಣೆ 23

# ಷಷ್ಠಿಪೂರ್ತಿಶಾಂತಿ

## ಷಷ್ಠಿಪೂರ್ತಿಶಾಂತಿ ಎಂದರೇನು

ಮನುಷ್ಯನಿಗೆ ಅರವತ್ತು ವರ್ಷವಾದಾಗ ಮಾಡಿಕೊಳ್ಳಬೇಕಾದ ಶಾಂತಿಗೆ ಷಷ್ಠಿಪೂರ್ತಿ ಶಾಂತಿ ಅಥವಾ ಷಷ್ಟ್ಯಬ್ದಪೂರ್ತಿಶಾಂತಿ ಎಂದು ಹೆಸರು.

ಷಷ್ಠಿ ಎಂದರೆ ಅರವತ್ತು. ಷಷ್ಟ್ಯಬ್ದ ಎಂದರೆ ಅರವತ್ತುವರ್ಷಗಳು. ಪೂರ್ತಿ ಎಂದರೆ ಪೂರ್ಣವಾದಾಗ ಎಂದರ್ಥ. ಅರವತ್ತುವರ್ಷಗಳು ಪೂರ್ಣವಾದಾಗ[1] ಮಾಡಿಕೊಳ್ಳುವ ಶಾಂತಿ ಷಷ್ಠಿಪೂರ್ತಿಶಾಂತಿ.

---

[1] ಅರವತ್ತು ನಡೆಯುವಾಗ ಅಲ್ಲ. ಅರವತ್ತು ಪೂರ್ಣವಾದಾಗ. ಯಾವ ಸಂವತ್ಸರದಲ್ಲಿ ಹುಟ್ಟಿರುತ್ತೇವೆಯೋ ಅದೇ ಸಂವತ್ಸರದಲ್ಲಿ ಷಷ್ಟಿಪೂರ್ತಿ ಶಾಂತಿ. **ಇಸವಿ ಅಥವಾ ವರ್ಷಗಳ ಲೆಕ್ಕದಲ್ಲಿ ಲೆಕ್ಕ ಹಾಕಬೇಡಿ. ಗೊಂದಲವಾಗುತ್ತದೆ. ಯಾವ ಸಂವತ್ಸರದಲ್ಲಿ ಹುಟ್ಟಿರುತ್ತೇವೆಯೋ ಮತ್ತೆ ಅದೇ ಸಂವತ್ಸರದಲ್ಲಿ ಷಷ್ಠಿಪೂರ್ತಿಶಾಂತಿಯನ್ನು ಮಾಡಿಕೊಳ್ಳಬೇಕು.**
"ಜನ್ಮಾಬ್ದೇ ಜನ್ಮಮಾಸೇ ಚ ಸ್ವಜನ್ಮದಿವಸೇ ತಥಾ ।
ಜನ್ಮರ್ಕ್ಷೇ ಚೈವ ಕರ್ತವ್ಯಾ ಶಾಂತಿರುಗ್ರರಥಾಹ್ವಯಃ"

ಇದರ ಶಾಸ್ತ್ರೀಯವಾದ ಹೆಸರು ಉಗ್ರರಥಶಾಂತಿ ಎಂದು.

ಉಗ್ರರಥ ಎನ್ನುವದು ಯಮಧರ್ಮದೇವರ ಒಂದು ರೂಪ. ಆ ರೂಪದ ಯಮಧರ್ಮದೇವರ ಪ್ರೀತ್ಯ-ರ್ಥವಾಗಿ ಮಾಡುವ ಶಾಂತಿಯೇ ಉಗ್ರರಥ ಶಾಂತಿ.

## ಏಕೆ ಮಾಡಬೇಕು

**ಜನ್ಮತಃ ಷಷ್ಟಿಮೇ ವರ್ಷೇ**
**ಮೃತ್ಯುರುಗ್ರರಥೋ ನೃಣಾಮ್ ।**
**ದಶಭಿಸ್ತ್ವಧಿಕೇ ತಸ್ಮಿನ್**
**ಮೃತ್ಯುರ್ಭೀಮರಥೋ ನೃಣಾಮ್ ।**
**ವಿಜಯಾಖ್ಯರಥೋ ಮೃತ್ಯುಃ**
**ಅಷ್ಟಸಪ್ತತಿಮೇ ಭವೇತ್ ।।**

**ಷಾಣ್ಮಾಸಾನ್ಮೃತ್ಯುಮಾಪ್ನೋತಿ**
**ಧನಹಾನಿಶ್ಚ ಜಾಯತೇ ।**
**ತದ್ದೋಷಶಮನಾರ್ಥಾಯ**
**ಶಾಂತಿಂ ಕುರ್ಯಾದ್ ವಿಚಕ್ಷಣಃ ।।**

ಅರವತ್ತನೆಯ ವರ್ಷದಲ್ಲಿ ಉಗ್ರರಥ ಎಂಬ ಯಮ. ಎಪ್ಪತ್ತನೆಯ ವಯಸ್ಸನಲ್ಲಿ ಭೀಮರಥ ಎಂಬ ಯಮ. ಎಪ್ಪತ್ತೆಂಟನೆಯ ವಯಸ್ಸಿನಲ್ಲಿ ವಿಜಯರಥ ಎಂಬ ಯಮ ನಮಗೆ ಮೃತ್ಯವನ್ನು ನೀಡುವ ದೇವತೆ.

ಈ ಉಗ್ರರಥ, ಭೀಮರಥ, ವಿಜಯರಥ ಎಂಬ ರೂಪದ ಯಮಧರ್ಮದೇವರು ಆರುತಿಂಗಳಲ್ಲಿ ಮೃತ್ಯುವನ್ನೂ, ಧನಹಾನಿಯನ್ನು ಉಂಟು ಮಾಡಬಲ್ಲರು.

ಶಾಸ್ತ್ರದಿಂದ ಈ ತಿಳುವಳಿಕೆಯನ್ನು ತಂದುಕೊಂಡ ವ್ಯಕ್ತಿ ಈ ದೋಷಗಳ ಪರಿಹಾರಾರ್ಥವಾಗಿ ಅರವತ್ತರಲ್ಲಿ ಉಗ್ರರಥಶಾಂತಿಯನ್ನೂ, ಎಪ್ಪತ್ತರಲ್ಲಿ ಭೀಮರಥಶಾಂತಿಯನ್ನೂ, ಹಾಗೆಯೇ ಎಪ್ಪತ್ತೆಂಟರಲ್ಲಿ ವಿಜಯರಥಶಾಂತಿಯನ್ನೂ ಮಾಡಿಕೊಳ್ಳಬೇಕು.

## ಯಾವಾಗ ಮಾಡಬೇಕು

**ಜನ್ಮಾಬ್ದೇ ಜನ್ಮಮಾಸೇ ಚ**
**ಸ್ವಜನ್ಮದಿವಸೇ ತಥಾ ।**
**ಜನ್ಮರ್ಕ್ಷೇ ಚೈವ ಕರ್ತವ್ಯಾ**
**ಶಾಂತಿರುಗ್ರರಥಾಹ್ವಯಃ ॥**

**ತಾನು ಹುಟ್ಟಿದ ಸಂವತ್ಸರ, ಹುಟ್ಟಿದ ಮಾಸ, ಹುಟ್ಟಿದ ತಿಥಿ ಅಥವಾ ವಾರ, ಹುಟ್ಟಿದ ನಕ್ಷತ್ರಗಳಲ್ಲಿ ಉಗ್ರರಥಶಾಂತಿಯನ್ನು ಮಾಡಿಕೊಳ್ಳಬೇಕು.**

ಅಂದರೆ ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ಸಪ್ತಮೀ, ರೇವತೀ ನಕ್ಷತ್ರದಂದು ಹುಟ್ಟಿದವರು ಸಿದ್ಧಾರ್ಥಿ ಸಂವತ್ಸರದ ಮಾಘ ಮಾಸದಲ್ಲಿ ರೇವತೀ ನಕ್ಷತ್ರ ಇರುವ ದಿವಸ ಶಾಂತಿಯನ್ನು ಮಾಡಿಕೊಳ್ಳಬೇಕು.

ಸಾಮಾನ್ಯವಾಗಿ ಜನ್ಮ ತಿಥಿ ಜನ್ಮ ನಕ್ಷತ್ರಗಳು ಒಟ್ಟಿಗೇ ಸಿಗುವದು ಕಷ್ಟ. ದೊರೆತಾಗ ಆ ದಿವಸವೇ ಮಾಡಿಕೊಳ್ಳಬೇಕು.  ಇಲ್ಲದಿದ್ದಲ್ಲಿ ಜನ್ಮಸಂವತ್ಸರದ

ಜನ್ಮಮಾಸದಲ್ಲಿ ಜನ್ಮನಕ್ಷತ್ರ, ಜನ್ಮತಿಥಿ, ಅಥವಾ ಜನ್ಮವಾರದಂದು ಶಾಂತಿ ಮಾಡಿಕೊಳ್ಳಬೇಕು.

ಅಮಾವಾಸ್ಯೆ ಪೌರ್ಣಿಮೆ ಅಷ್ಟಮೀ ಮುಂತಾದ ದಿವಸಗಳಲ್ಲಿ ಹುಟ್ಟಿದವರು ಆ ದಿವಸವೇ ಜನ್ಮನಕ್ಷತ್ರವೂ ಇದ್ದರೆ ಶಾಂತಿ ಮಾಡಿಕೊಳ್ಳಬಹುದು.

**ಈ ಶಾಂತಿಗೆ ಶುಭತಿಥಿಯೇ ಶುಭನಕ್ಷತ್ರ, ಶುಭವಾರವೇ ಆಗಬೇಕೆಂದೇನೂ ಇಲ್ಲ. ಜನ್ಮತಿಥಿ, ಜನ್ಮವಾರ, ಜನ್ಮನಕ್ಷತ್ರಗಳೇ ಪ್ರಧಾನ.**

ಅದರಲ್ಲಿಯೂ  ಜನ್ಮವಾರಕ್ಕಿಂತ ಜನ್ಮತಿಥಿ ಮುಖ್ಯ. ಅದಕ್ಕಿಂತ ಮುಖ್ಯ ಜನ್ಮನಕ್ಷತ್ರ. ಈ ಮೂರೂ ದೊರೆತರೆ ಸರ್ವೋತ್ತಮ. ಎರಡು ದೊರೆತರೆ ಅತ್ಯುತ್ತಮ. ಒಂದಾದರೂ ಇರಲೇಬೇಕು.

ಇದು ಯಾವುದೂ ದೊರೆಯದೇ ಇದ್ದಾಗ ಜನ್ಮಮಾಸದಲ್ಲಿ ಶುಭತಿಥಿಯಂದು ಶುಭನಕ್ಷತ್ರವಿರುವ ದಿವಸ ಮಾಡಿಕೊಳ್ಳಬೇಕು.

ಜನ್ಮಮಾಸದಲ್ಲಿ ಮಾಡಿಕೊಳ್ಳಲು ಸಾಧ್ಯವೇ ಇಲ್ಲದ ಪಕ್ಷದಲ್ಲಿ ಜನ್ಮಸಂವತ್ಸರದಲ್ಲಿ ಮಾಡಿಕೊಳ್ಳಲೇಬೇಕು.

ಏಕಾದಶಿಯ ಉಪವಾಸ ಮಾಡಬೇಕು ಹಾಗೂ ಏಕಾದಶಿಯಂದು ಶಾಂತಿ ಮುಂತಾದವುಗಳನ್ನು ಮಾಡಬಾರದು ಎಂಬ ಎರಡು ನಿಯಮಗಳು ಈ ಶಾಂತಿಯ ನಿಯಮಕ್ಕಿಂತಲೂ ಮಿಗಿಲಾದಕಾರಣ ಏಕಾದಶಿಯಂದು ಜನಿಸಿದವರು ಬೇರೆಯ ದಿವಸ ಶಾಂತಿಯನ್ನು ಮಾಡಿಕೊಳ್ಳಬೇಕು.[2]

ದ್ವಾದಶಿಯ ಪಾರಣೆಯ ನಿಯಮವೂ ಶಾಂತಿಯ ನಿಯಮಕ್ಕಿಂತ ಮಿಗಿಲಾದ ಕಾರಣ, ದ್ವಾದಶಿಯಂದು ಜನಿಸಿದವರು ತಮ್ಮ ಜನ್ಮನಕ್ಷತ್ರ ಅಥವಾ ಜನ್ಮವಾರದಂದು ಶಾಂತಿಯನ್ನು ಆಚರಿಸಿಕೊಳ್ಳತಕ್ಕದ್ದು.

---

[2] ಏಕಾದಶಿಯು ದಶಮಿಯಿಂದ ವಿದ್ಧವಾದಾಗ ಆ ದಿವಸ ಉಪವಾಸ ಮಾಡಬಾರದು. ಹೀಗಾಗಿ ಅಂತಹ ಏಕಾದಶಿಗಳಲ್ಲಿ ಅವಶ್ಯವಾಗಿ ಶಾಂತಿಯನ್ನು ಮಾಡಬಹುದು.

## ಎಲ್ಲಿ ಮಾಡಬೇಕು

**ದೇವಾಲಯೇ ನದೀತೀರೇ**
**ಸ್ವಗೃಹೇ ವಾ ಶುಭಸ್ಥಲೇ ।**

ಉಗ್ರರಥ, ಭೀಮರಥ, ವಿಜಯರಥಶಾಂತಿಗಳನ್ನು ಆಚರಿಸಿಕೊಳ್ಳಲು ದೇವಸ್ಥಾನಗಳು ಸರ್ವೋತ್ತಮ ಸ್ಥಳ. ನದೀತೀರಗಳು ಅತ್ಯುತ್ತಮ. ಸ್ವಗೃಹ ಉತ್ತಮ. ಈ ಮೂರೂ ಕಡೆಯಲ್ಲಿ ಮಾಡಿಕೊಳ್ಳಲು ಸಾಧ್ಯವಿಲ್ಲದೇ ಇದ್ದಾಗ ಶುಭಪ್ರದೇಶದಲ್ಲಿ ಆಚರಿಸಿಕೊಳ್ಳಬೇಕು.

## ಶಾಂತಿಯನ್ನು ಆಚರಿಸಿಕೊಳ್ಳುವ ಕ್ರಮ

**ಸ್ವಸೂತ್ರೋಕ್ತೇನ ಮಾರ್ಗೇಣ**
**ಶಾಂತಿಹೋಮಂ ಸಮಾಚರೇತ್**

ನಾವು ಯಾವ ವೇದದ ಯಾವ ಶಾಖೆಗೆ ಸೇರಿದವರೋ ಅದೇ ವೇದ ಶಾಖೆಯ ಕ್ರಮದ ಅನುಸಾರವಾಗಿ ಶಾಂತಿಯನ್ನು ಆಚರಿಸಿಕೊಳ್ಳಬೇಕು.

## ಜಪ

ಉಗ್ರರಥ ಎಂಬ ಹೆಸರಿನ ಯಮಧರ್ಮದೇವರ ಪ್ರೀತ್ಯರ್ಥವಾಗಿ ಮಾಡುವ ಶಾಂತಿಯಾದ್ದರಿಂದ ಅದೇ ನಾಮದ ಜಪವನ್ನು 60 ಸಾವಿರ ಅಥವಾ ಅದಕ್ಕಿಂತ ಹೆಚ್ಚು ಮಾಡಬೇಕು.

ನಾವು ಹುಟ್ಟಿದ ಸಂವತ್ಸರದ ಹಿಂದಿನ ಸಂವತ್ಸರದಲ್ಲಿ ಹುಟ್ಟಿದ ದಿನದಂದು ಶಾಂತಿಯನ್ನು ಆರಂಭಿಸಿ ಸಮಗ್ರ ಆ ವರ್ಷದಲ್ಲಿ ಜಪವನ್ನು ಮಾಡಿ ನಂತರ ಹುಟ್ಟಿದ ಸಂವತ್ಸರದಲ್ಲಿ ಶಾಂತಿ ಮಾಡಿಕೊಳ್ಳುವದು ಉತ್ತಮ ಪಕ್ಷ.

ಹುಟ್ಟಿದ ವರ್ಷದಲ್ಲಿ ಹುಟ್ಟಿದ ದಿವಸದಂದೇ ಶಾಂತಿಯನ್ನು ಮಾಡಿಕೊಂಡು ಆ ದಿವಸವೇ ಶಾಂತಿಯನ್ನು ಆರಂಭಿಸಿ ಇಡಿಯ ವರ್ಷ ಜಪ ಮಾಡುವದು ಮತ್ತೊಂದು ಪಕ್ಷ.

ನೀವು ಪ್ರಭವಸಂವತ್ಸರದ ಮಾಘ ಶುದ್ಧ ಸಪ್ತಮಿಯಂದು ಹುಟ್ಟಿದ್ದರೆ ಅದರ ಹಿಂದಿನ ಕ್ಷಯಸಂವತ್ಸರದ ಮಾಘಶುದ್ಧ ಸಪ್ತಮಿಯಂದು

ಜಪ ಆರಂಭಿಸಿ. ಪ್ರಭವ ಮಾಘಶುದ್ಧ ಸಪ್ತಮಿಯಂದು ಶಾಂತಿಯನ್ನು ಆಚರಿಸಿ.

ಅಥವಾ ಪ್ರಭವದ ಮಾಘ ಸಪ್ತಮಿಯಂದೇ ಶಾಂತಿಯನ್ನು ಆಚರಿಸಿ ವಿಭವಸಂವತ್ಸರದ ಮಾಘ ಸಪ್ತಮಿಯವರೆಗೆ ಜಪ ಮಾಡಿ ಸಮರ್ಪಿಸಬಹುದು.

ಸಂಕಲ್ಪ ಹೀಗಿದೆ—

**ಮಮ ಅಪಮೃತ್ಯುಪರಿಹಾರಾರ್ಥಂ**
**ಜನ್ಮನಿಜನ್ಮನಿ ವೈಷ್ಣವತ್ವಪ್ರಾಪ್ತ್ಯರ್ಥಂ**
**ಶ್ರೀಶ್ಯಾಮಲಾಪತಿ ಉಗ್ರರಥಾಖ್ಯಯಮಾಂತರ್ಗತ**
**ಭಾರತೀರಮಣಮುಖ್ಯಪ್ರಾಣಾಂತರ್ಗತ**
**ಶ್ರೀಲಕ್ಷ್ಮೀನೃಸಿಂಹಪ್ರೇರಣಯಾ**
**ಶ್ರೀಲಕ್ಷ್ಮೀನೃಸಿಂಹಪ್ರೀತ್ಯರ್ಥಂ**
**ಉಗ್ರರಥಮಂತ್ರಜಪಂ ಕರಿಷ್ಯೇ**

**ಶ್ರೀ ಉಗ್ರರಥಾಯ ನಮಃ**

ಎಂದು ಶ್ಯಾಮಲಾಪತಿಯಮಧರ್ಮದೇವರನ್ನು ಭಾರತೀಪತಿಮುಖ್ಯಪ್ರಾಣದೇವರನ್ನು

ಶ್ರೀ ಲಕ್ಷ್ಮೀನೃಸಿಂಹದೇವರನ್ನು ಮನಸ್ಸಿನಲ್ಲಿ ಚಿಂತಿಸುತ್ತ ಜಪವನ್ನು ಮಾಡಬೇಕು.

ಪ್ರತೀನಿತ್ಯ ಪ್ರಾತಃ ಮತ್ತು ಸಾಯಂ ಸಂಧ್ಯಾವಂದನೆಯ ನಂತರ ಜಪವನ್ನು ಮಾಡಬೇಕು.

ಈ ಜಪವನ್ನು ಮಾಡುವಾಗ ತುಳಸೀಮಣಿ ಮತ್ತು ಕಮಲಾಕ್ಷಮಣಿಗಳ ಸರವನ್ನು ಬಳಸಬಹುದು.

## ಶಾಂತಿಯ ಪೂರ್ವಸಿದ್ಧತೆಗಳು

**ಆಚಾರ್ಯಂ ವರಯೇತ್ ಪೂರ್ವಂ**
**ಋತ್ವಿಜಶ್ಚ ತತಃ ಪರಮ್**

ಶಾಂತಿಯನ್ನು ಮಾಡಿಸುವ ಪುರೋಹಿತರನ್ನು ಮೊದಲಿಗೇ ಪೌರೋಹಿತ್ಯಕ್ಕಾಗಿ ಪ್ರಾರ್ಥಿಸಬೇಕು. ಆ ನಂತರ ಹೋಮದ ಋತ್ವಿಜರನ್ನೂ ಪ್ರಾರ್ಥಿಸಿ ದಿವಸ ಸ್ಥಳಗಳನ್ನು ನಿಗದಿಪಡಿಸಿಕೊಳ್ಳಬೇಕು.

## ಪೂಜಾಮಂಟಪ

**ಗೃಹಸ್ಯೈಶಾನದಿಗ್ಭಾಗೇ**
**ಮಂಟಪಂ ಕಾರಯೇಚ್ಛುಭಮ್**
**ವ್ರೀಹಿರಾಶಿಂ ವಿನಿಕ್ಷಿಪ್ಯ**
**ತದರ್ಧಂ ತಂಡುಲಂ ನ್ಯಸೇತ್**
**ತದರ್ಧಂ ತಿಲಾನ್ ನ್ಯಸ್ಯ**
**ಪದ್ಮಮಷ್ಟದಳಂ ಲಿಖೇತ್**

ದೇವಾಲಯ ನದೀತೀರಗಳಲ್ಲಿ ಮಾಡುವದಾದರೆ ಸೂಕ್ತ ಪ್ರದೇಶದಲ್ಲಿ, ಮನೆಯಲ್ಲಿ ಮಾಡುವದಾದರೆ ಮನೆಯ ಈಶಾನ್ಯದಲ್ಲಿ[3] ಶಾಂತಿಗಾಗಿ ಮಂಟಪದ ರಚನೆಯನ್ನು ಮಾಡಬೇಕು.

ಸ್ಥಳವನ್ನು ಗೋಮಯದಿಂದ ಸಾರಿಸಿ ಅದರ ಮೇಲೆ ಮಂಟಪವನ್ನಿಟ್ಟು ಮಂಟಪದ ನಾಲ್ಕೂ ಕಂಬಕ್ಕೆ ಬಾಳೆಕಂಬಗಳನ್ನು ನಾಲ್ಕೂ ಕಡೆಯಲ್ಲಿ ಮಾವಿನ ತೋರಣವನ್ನು ಕಟ್ಟಬೇಕು.

---

[3] ಈಶಾನ್ಯ ಸಾಧ್ಯವಿಲ್ಲದಿದ್ದರೆ ಪೂರ್ವ ಅಥವಾ ಉತ್ತರದಿಕ್ಕಿನಲ್ಲಿ.

ಮಂಟಪದ ಮಧ್ಯದಲ್ಲಿ ರಂಗೋಲಿಯನ್ನು ಬರೆದು ಅದರ ಮೇಲೆ ಒಂದು ಎಲೆ ಅಥವಾ ಶುದ್ಧಲೋಹದ[4] ತಟ್ಟೆಯನ್ನಿಟ್ಟು ಮೊದಲು ಭತ್ತವನ್ನು ಸುರಿದು ಹರಡಬೇಕು.

ಆ ಭತ್ತದ ಮೇಲೆ ಮತ್ತೊಂದು ಎಲೆ ಅಥವಾ ತಟ್ಟೆಯನ್ನಿಟ್ಟು ಭತ್ತದ ಅರ್ಧದಷ್ಟು ಅಕ್ಕಿಯನ್ನು ಸುರಿಯಬೇಕು.

ಆ ಅಕ್ಕಿಯ ಮೇಲೆ ಮತ್ತೊಂದು ಎಲೆ ಅಥವಾ ತಟ್ಟೆಯನ್ನಿಟ್ಟು ಆ ಅಕ್ಕಿಯ ಅರ್ಧದಷ್ಟು ಕರಿಯ ಎಳ್ಳನ್ನು ಸುರಿದು ಹರಡಬೇಕು[5].

ಎಳ್ಳಿನಲ್ಲಿ ಯಮಧರ್ಮದೇವರ ಸನ್ನಿಧಾನ. ಅಕ್ಕಿಯಲ್ಲಿ ರುದ್ರದೇವರ ಸನ್ನಿಧಾನ. ಭತ್ತದಲ್ಲಿ ನರಸಿಂಹನ ಸನ್ನಿಧಾನ.

---

[4] ಶುದ್ಧಲೋಹ ಎಂದರೆ ತಾಮ್ರ, ಹಿತ್ತಾಳೆ, ಬೆಳ್ಳಿ, ಬಂಗಾರಗಳು. ಸ್ಟೀಲ್, ಪ್ಲಾಸ್ಟಿಕ್ಕುಗಳನ್ನು ಸರ್ವಥಾ ಉಪಯೋಗಿಸಬಾರದು.

[5] ಅಂದರೆ ಒಂದು ಸೇರು ಭತ್ತವಾದರೆ ಎರಡು ಪಾವು ಅಕ್ಕಿ, ಒಂದು ಪಾವು ಎಳ್ಳು.

ಯಮಧರ್ಮದೇವರಿಗೆ ರುದ್ರದೇವರು ಆಧಾರ, ರುದ್ರದೇವರಿಗೆ ನರಸಿಂಹದೇವರು ಆಧಾರ ಎಂದು ಅನುಸಂಧಾನ ಮಾಡುತ್ತ ಈ ರೀತಿಯಾಗಿ ಹರಡಬೇಕು.

**ಮಧ್ಯೇ ಲಿಖಿತ್ವಾ ಹ್ರೀಂಕಾರಂ**
**ಕುಂಭಂ ಸಂಸ್ಥಾಪಯೇದ್ ಬುಧಃ**

ಆ ಎಳ್ಳಿನ ಮೇಲೆ ಅಷ್ಟದಳದ ಪದ್ಮವನ್ನು ಚಿತ್ರಣ ಮಾಡಬೇಕು. ಆ ಅಷ್ಟದಳದ ಪದ್ಮದ ಮಧ್ಯದಲ್ಲಿ ಹ್ರೀಂ ಎಂಬ ಬೀಜಮಂತ್ರವನ್ನು ಬರೆಯಬೇಕು.

ಆ ನಂತರ ಶುದ್ಧಲೋಹದ ಕಲಶವನ್ನು ತೆಗೆದುಕೊಂಡು ಅದನ್ನು ಗಂಧ, ಅಕ್ಷತೆಗಳಿಂದ ಅಲಂಕಾರ ಮಾಡಿ ಅದರಲ್ಲಿ ಶುದ್ಧಜಲ ಅಥವಾ ದ್ರಾಕ್ಷಿ ಗೋಡಂಬಿ[6] ಮುಂತಾದ ಒಣಹಣ್ಣುಗಳನ್ನು ತುಂಬಿಸಿ, ಮಾವಿನ ಎಲೆಗಳನ್ನಿಟ್ಟು ಅದರ ಮೇಲೆ ಅರಿಶಿನ ಕುಂಕುಮಗಳಿಂದ ಅಲಂಕೃತವಾದ

---

[6] ಚಾತುರ್ಮಾಸ್ಯ ವ್ರತದಲ್ಲಿ ಗೋಡಂಬಿ ಮುಂತಾದವು ಗ್ರಾಹ್ಯವಲ್ಲದೇ ಇದ್ದಾಗ ನೀರನ್ನು ಮಾತ್ರ ತುಂಬಿಸಬೇಕು.

ನೀರಿರುವ ಒಳ್ಳೆಯ ತೆಂಗಿನಕಾಯನ್ನಿಟ್ಟು ಆ ಕಲಶವನ್ನು ಆ ಹ್ರೀಂಕಾರದ ಮೇಲೆ ಸ್ಥಾಪಿಸಬೇಕು.

ಈ ಎಲ್ಲ ಸಿದ್ಧತೆಯನ್ನು ಮಾಡಿಕೊಳ್ಳುವಾಗ ಗಾಯತ್ರೀ, ಸೂಕ್ತಗಳು, ವಿಷ್ಣುಸಹಸ್ರನಾಮ ಮುಂತಾದವನ್ನು ಪಠಿಸುತ್ತ ಶ್ರೀಹರಿಯ ಸ್ಮರಣೆಯನ್ನು ಮಾಡುತ್ತಿರಬೇಕು ಎನ್ನುವದನ್ನು ಶಾಸ್ತ್ರ "ಬುಧಃ" ಎನ್ನುವ ಶಬ್ದದಿಂದ ತಿಳಿಸುತ್ತದೆ.

**ಉಗ್ರಂ ಮೃತ್ಯುಂಜಯಂ[7] ದೇವಂ**
**ಸುವರ್ಣೇನ ಪ್ರಕಲ್ಪಯೇತ್**

ಆ ನಂತರ ದೇವರು ತನಗೆ ಶಕ್ತಿಯಿತ್ತಂತೆ ಬಂಗಾರ, ಬೆಳ್ಳಿ ಅಥವಾ ಪಂಚಲೋಹದಿಂದ ನರಸಿಂಹದೇವರ ಮತ್ತು ರುದ್ರದೇವರ ಪ್ರತಿಮೆಯನ್ನು ಮಾಡಿಸಬೇಕು. ಆ ಪ್ರತಿಮೆಗಳನ್ನು ಕಲಶದ ಮುಂಭಾಗದಲ್ಲಿ ಸ್ಥಾಪಿಸಬೇಕು.

ಅಥವಾ ಕಲಶಕ್ಕಿಂತ ಎತ್ತರದಲ್ಲಿ ನರಸಿಂಹದೇವರು, ಅವರ ಕೆಳಗೆ

---

[7] ಉಗ್ರ ಎಂದರೆ ನರಸಿಂಹ. ಮೃತ್ಯುಂಜಯ ಎಂದರೆ ರುದ್ರದೇವರು.

ಮೃತ್ಯುಂಜಯರುದ್ರದೇವರು, ಅವರ ಕೆಳಗೆ ಕಲಶ ಬರುವಂತೆಯೂ ಸ್ಥಾಪಿಸಬಹುದು.

ಪ್ರತಿಮೆ ಮಾಡಿಸುವ ಸಾಮರ್ಥ್ಯವಿಲ್ಲದಿದ್ದರೆ ಅಡಿಕೆಯಲ್ಲಿ ನರಸಿಂಹ ಮೃತ್ಯುಂಜಯರನ್ನು ಪೂಜಿಸಬೇಕು.

## ಹೋಮದ ಕುಂಡಗಳು

ಪೂಜಾ ಮಂಟಪದ ಪಶ್ಚಿಮದಲ್ಲಿ  ಒಟ್ಟು ಮೂರು ಹೋಮದ ಕುಂಡಗಳಿರಬೇಕು.

**ಮಂಟಪಾದ್ ಪಶ್ಚಿಮೇ ಭಾಗೇ**
**ಕುಂಡತ್ರಿತಯಮಾಚರೇತ್**
**ದಕ್ಷಿಣೇ ಗ್ರಹಹೋಮಾರ್ಥಂ**
**ಕುಂಡಮೇಕಕರಂ ಭವೇತ್**

**ಮಧ್ಯಮೇ ಶಾಂತಿಹೋಮಾರ್ಥಂ**
**ಕುಂಡಮೇಕಕರಂ ಸ್ಮೃತಮ್**
**ದ್ವಿಹಸ್ತಕುಂಡಮಯುತ-**
**ತಿಲಹೋಮಾರ್ಥಮುತ್ತರೇ**

ನಾವು ಪೂರ್ವಾಭಿಮುಖವಾಗಿ ಕುಳಿತು ಪೂಜೆ ಮಾಡುತ್ತೇವೆ ಎಂದರೆ ಮಂಟಪ ಪಶ್ಚಿಮಾಭಿಮುಖವಾಗಿರುತ್ತದೆ.  ಮಂಟಪದ ಪಶ್ಚಿಮಕ್ಕೆ ಹೋಮದ ಕುಂಡ ಎಂದರೆ ಮಂಟಪದ ಎದುರಿನಲ್ಲಿ ಹೋಮದ ಕುಂಡಗಳು ಎಂದರ್ಥ.

ಅಂದರೆ ಮಂಟಪ ಮತ್ತು ಹೋಮದ ಕುಂಡಗಳ ಮಧ್ಯದಲ್ಲಿ ಕುಳಿತು ಪೂಜೆ ಮಾಡುತ್ತೇವೆ. ಆ ನಂತರ ಕುಂಡಗಳ ಮುಂದೆ ಕುಳಿತು ಮಂಟಪವನ್ನು ನೋಡುತ್ತ ಹೋಮವನ್ನು ಮಾಡುತ್ತೇವೆ.

ಮಂಟಪದ ಎದುರಿಗೆ ಮಧ್ಯದಲ್ಲಿ ಯಜಮಾನನ ಕೈ ಎಷ್ಟು ಉದ್ದವಿದೆಯೋ[8] ಅಷ್ಟು ಪ್ರಮಾಣದ ಒಂದು ಕುಂಡವನ್ನು ಹಾಕಬೇಕು. ಅದರಲ್ಲಿಯೇ ಶಾಂತಿಹೋಮವನ್ನು ಮಾಡಬೇಕು.

ಆ ಶಾಂತಿಹೋಮಕುಂಡದ ಬಲಭಾಗದಲ್ಲಿ ಅಷ್ಟೇ ಪ್ರಮಾಣದ ಮತ್ತೊಂದು ಕುಂಡ. ಅದರಲ್ಲಿ ಗ್ರಹಹೋಮವನ್ನು ಮಾಡಬೇಕು.

ಆ ಶಾಂತಿಹೋಮಕುಂಡದ ಎಡಭಾಗದಲ್ಲಿ ಎರಡುಕೈಗಳ ಉದ್ದದ ಒಂದು ಕುಂಡವನ್ನು ಹಾಕಬೇಕು. ಅದರಲ್ಲಿ ತಿಲಹೋಮವನ್ನು ಮಾಡಬೇಕು.

---

[8] ಮೊಣಕೈಯಿಂದ ಮಧ್ಯದ ಬೆರಳಿನವರೆಗಿನ ಉದ್ದ. ಕುಂಡದ ಒಳಭಾಗದಲ್ಲಿ ಅಷ್ಟು ಸ್ಥಳವಿರಬೇಕು.

**ತಂತ್ರೇಣೈಕತ್ರ ಸರ್ವೇಷಾಂ**
**ಹವನೇ ತ್ವೇಕಕುಂಡಕಮ್**

ಮೂರೂ ಹೋಮದ ಕುಂಡಗಳನ್ನು ಹಾಕಲು ಸಾಧ್ಯವಿಲ್ಲದ ಪಕ್ಷದಲ್ಲಿ ಒಂದೇ ಹೋಮದ ಕುಂಡವನ್ನೂ ಮಾಡಬಹುದು. ಪ್ರಯತ್ನ ಪಟ್ಟು ಮೂರು ಹೋಮದ ಕುಂಡಗಳನ್ನು ಮಾಡುವದು ಉತ್ತಮ ಪಕ್ಷ.

## ಅಭಿಷೇಕದ ವೇದಿಕೆ

**ಯಜಮಾನೋಪವೇಶಾರ್ಥಂ**
**ತತ್ಪಶ್ಚಾದ್ ವೇದಿಕಾಂ ಶುಭಾಮ್ ।**
**ಕುರ್ಯಾದುದೀಚ್ಯಾಮೈಶಾನ್ಯಾಂ**
**ಅಭಿಷೇಕಾರ್ಥಮಂಟಪಮ್ ।**

ಹೋಮ ಮತ್ತು ಪೂಜೆ ಮುಗಿದ ನಂತರ ಸಪತ್ನೀಕನಾದ ಯಜಮಾನನಿಗೆ ಮೃತ್ಯುಸೂಕ್ತ, ಆಯುಷ್ಯಸೂಕ್ತ, ಪುರಾಣಮಂತ್ರಗಳನ್ನು ಹೇಳುತ್ತ ಪವಿತ್ರಜಲಗಳಿಂದ ಅಭಿಷೇಕವನ್ನು ಮಾಡಬೇಕು.

ಅದಕ್ಕಾಗಿ ಮಂಟಪಕ್ಕೆ ಉತ್ತರ ಅಥವಾ ಈಶಾನ್ಯದಲ್ಲಿ  ಸೂಕ್ತವಾದ ರೀತಿಯಲ್ಲಿ ವೇದಿಕೆಯನ್ನು ಮಾಡಬೇಕು.

ಅಭಿಷೇಕದ ವೇದಿಕೆಗಿಂತ ಪೂಜಾಮಂಟಪ ಎತ್ತರದಲ್ಲಿರಬೇಕು.

## ಶಾಂತಿಯ ಕ್ರಮ

ಶಾಂತಿಯ ದಿವಸ ಶಾಂತಿಯ ಕಾರ್ಯಗಳು ಈ ಕ್ರಮದಲ್ಲಿ ಜರುಗುತ್ತವೆ.

ಮೊದಲು ಮಂಗಳಸ್ನಾನ.

ಆ ನಂತರ ಪೂಜಾಸಿದ್ಧತೆ.

ಆ ನಂತರ ಗುರು ಹಿರಿಯರಿಗೆ ನಮಸ್ಕಾರ.

ಬಳಿಕ ಪುಣ್ಯಾಹವಾಚನ.

ನಿರ್ವಿಘ್ನಗಣಪತಿಪೂಜೆ.

ಕಲಶಪೂಜೆ.

ನರಸಿಂಹದೇವರಿಗೆ ಷೋಡಶೋಪಚಾರಪೂಜೆ.

ಮೃತ್ಯುಂಜಯನಿಗೆ ಷೋಡಶೋಪಚಾರಪೂಜೆ.

ಉಗ್ರರಥನಿಗೆ ಷೋಡಶೋಪಚಾರಪೂಜೆ.

ಶಾಂತಿಹೋಮ, ಗ್ರಹಹೋಮ, ತಿಲಹೋಮಗಳು.

ಜಪದ ಸಂಕಲ್ಪ ಅಥವಾ ಸಮರ್ಪಣೆ[9]

ನರಸಿಂಹ, ಮೃತ್ಯುಂಜಯ, ಉಗ್ರರಥರಿಗೆ ಉತ್ತರಪೂಜೆ.

ವಿಸರ್ಜನೆ.

ಯಜಮಾನದಂಪತಿಗಳಿಗೆ ಅಭಿಷೇಕ.

ಬ್ರಾಹ್ಮಣದಂಪತಿಪೂಜೆ, ದಾನಗಳು.

ಆನಂತರ ಭೋಜನ.

---

[9] 59ನೆಯ ವರ್ಷದಲ್ಲಿಯೇ ಜಪ ಮಾಡಿದ್ದರೆ ಸಮರ್ಪಣೆ. ಶಾಂತಿಯ ದಿವಸವೇ ಜಪ ಆರಂಭಿಸುವದಾದರೆ ಸಂಕಲ್ಪ. ಜಪ ಆರಂಭವಾಗಿ ಇನ್ನೂ ಮುಗಿದಿಲ್ಲವಾದರೆ ಹಿಂದಿನದರ ಸಮರ್ಪಣೆ, ಮುಂದಿನದರ ಸಂಕಲ್ಪ ಎರಡೂ ಮಾಡಬೇಕು.

## ಅನುಸಂಧಾನ ಮತ್ತು ಗುರುಸ್ಮರಣೆ

ಅಲ್ಪಾಯುಷ್ಯವನ್ನು ಪಡೆದರೂ ಆ ಸಮಗ್ರ ಆಯುಷ್ಯವನ್ನು ಪರಿಪೂರ್ಣವಾಗಿ ಸದುಪಯೋಗ ಪಡಿಸಿಕೊಂಡ ಮಹಾನುಭಾವರನ್ನು,

ತಮ್ಮ ಪರಿಪೂರ್ಣಾಯುಷ್ಯದಲ್ಲಿ ಮಹತ್ತರ ಸಾಧನೆಯನ್ನು ಮಾಡಿ, ಇಚ್ಛಾಮರಣಿಗಳಾಗಿ, ವೃಂದಾವನಪ್ರವೇಶದ ನಂತರವೂ ಮಹಾಸಾಧನೆಯನ್ನು ಮಾಡುತ್ತಿರುವ ಶ್ರೀ ಭಾಷ್ಯದೀಪಿಕಾಚಾರ್ಯರು, ಶ್ರೀ ಶೇಷಚಂದ್ರಿಕಾಚಾರ್ಯರು, ಶ್ರೀ ಮಂತ್ರಾಲಯಪ್ರಭುಗಳಾದ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು, ಶ್ರೀ ವಿಜಯೀಂದ್ರಗುರುಸಾರ್ವಭೌಮರು, ಪರಮಮಂಗಳರಾದ ಶ್ರೀಮದ್ವಾದಿರಾಜಗುರುಸಾರ್ವಭೌಮರು, ಶ್ರೀಮಚ್ಚಂದ್ರಿಕಾಚಾರ್ಯರು, ಶ್ರೀಮಟ್ಟೀಕಾಕೃತ್ಪಾದರು,

ಶ್ರೀಪದ್ಮನಾಭತೀರ್ಥಗುರುಸಾರ್ವಭೌಮರು ಮುಂತಾದ ಮಹಾಮಹಾಗುರುಗಳನ್ನು,

ಮೂವತ್ತಾರು ಸಾವಿರ ವರ್ಷಗಳ ಕಾಲ ಕಲಿಯುಗದಲ್ಲಿ ಶ್ರೀ ವೇದವ್ಯಾಸದೇವರ ಸಾಕ್ಷಾತ್ ಸೇವೆಯನ್ನು ಮಾಡುವ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರನ್ನು,

ಅವತರಣ ಮಾಡಿ ಬಂದು ಚಿರಂಜೀವರಾಗಿ ಭೂಮಿಯೇ ಮೇಲೇ ಇದ್ದು ಸಮಸ್ತ ಸಜ್ಜನ ಸಮುದಾಯಕ್ಕೆ ಜ್ಞಾನವನ್ನು ಅನುಗ್ರಹಿಸುವ ಶ್ರೀಪರಶುರಾಮ-ವೇದವ್ಯಾಸದೇವರನ್ನು,

ತಮ್ಮ ಅದ್ಭುತ ತಪೋಬಲದಿಂದ ಸಾವನ್ನೂ ಗೆದ್ದು, ಅಂತರ್ಯಾಮಿಯ ಅನನ್ಯ ಆರಾಧನೆ ಮಾಡುವ ಕಶ್ಯಪಾದಿ ಮಹಾಋಷಿಸಮೂಹವನ್ನು,

ಇಡಿಯ ಬ್ರಹ್ಮದೇವರ ನೂರು ವರ್ಷದ ಆಯುಷ್ಯದಲ್ಲಿ, ನಮ್ಮ ಊಹೆಗೆ ಮೀರಿದ ಮಹತ್ತರ ಸಾಧನೆಯನ್ನು ಮಾಡಿ, ನಿಖಿಲಜೀವರನ್ನು ಸಕಲ ಕಾರ್ಯಗಳಲ್ಲಿ ಪ್ರೇರಿಸುತ್ತ ಶ್ರೀಹರಿಯ ಆರಾಧನೆ ಮಾಡುವ ಸಮಸ್ತ ತತ್ವಾಭಿಮಾನಿದೇವತೆಗಳನ್ನು,

ಅನಾದಿಕಾಲದಿಂದ ಅನಂತ ಕಾಲದವರೆಗೆ ಶಾಶ್ವತನಾಗಿ ಇರುವ, ಹುಟ್ಟು ಸಾವು, ಮುಪ್ಪು, ರೋಗಗಳ ಭಯವೇ ಇಲ್ಲದ, ನಿತ್ಯಮುಕ್ತನಾದ, ಸದಾ ಆನಂದಸ್ವರೂಪನಾದ, ಅನಂತಕೋಟಿಬ್ರಹ್ಮಾಂಡನಾಯಕನಾದ ರಮಾಬ್ರಹ್ಮಾದಿವಂದ್ಯನಾದ, ನಮ್ಮನ್ನು ಯಾವ ಕಾಲದಲ್ಲಿಯೂ ಬಿಟ್ಟು ಹೋಗದ, ನಮ್ಮ ಅವಿಜ್ಞಾತಸಖನಾದ ಶ್ರೀಹರಿಯನ್ನು

ಶಾಂತಿಯ ಕಾಲದಲ್ಲಿ ಭಕ್ತಿಯಿಂದ ನೆನೆಯುತ್ತಲೇ ಇರಬೇಕು. ಸಾಧ್ಯವಾದಷ್ಟು ಈ ಎಲ್ಲ ಗುರುದೇವತೆಗಳಿಗೆ ನಮಸ್ಕರಿಸಬೇಕು.

ಆಗಲೇ ಶಾಂತಿಯ ಫಲವನ್ನು ಪಡೆಯಲು ಸಾಧ್ಯ.

ಉಗ್ರರಥ ಶಾಂತಿಯನ್ನು ಮಾಡಿಕೊಳ್ಳುವ ಸಕಲರಿಗೂ ಶ್ರೀಹರಿ ವಾಯು ದೇವತಾ ಗುರುಗಳು ಸುಧೃಢ ಆರೋಗ್ಯವನ್ನು ಕರುಣಿಸಿ ಉತ್ತಮ ಸಾಧನೆಯನ್ನು ಮಾಡಿಸಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491